**ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ**

**ಸಿ.ಸಿ.ನಂ.523/2019**

ಅಸಾ:6 (ಚಾಸಾ-9)

| | |
|---|---|
| ಹೆಸರು | ಸೌಕತ ಮುಜಾವರ |
| ತಂದೆಯ /ಗಂಡನ ಹೆಸರು | ಬಾಶಾಸಾಬ |
| ವಯಸ್ಸು | 36 ವರ್ಷ |
| ಉದ್ಯೋಗ | ಕೂಲಿ |
| ವಾಸಸ್ಥಳ | ಹನಗಂಡಿ |

ದಿನಾಂಕ 30-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರವರಿಂದ:-**

ಚಾಸಾ-6 ನನ್ನ ತಂದ. ಚಾಸಾ-1 ಮತ್ತು 7 ನನ್ನ ಸಹೋದರರು. ಚಾಸಾ-8 ನನ್ನ ಚಿಕ್ಕಪ್ಪ. ಆರೋಪಿಯ ಪರಿಚಯ ಇರುವದಿಲ್ಲ. ಸುಮಾರು 05-06 ವರ್ಷಗಳ ಹಿಂದೆ ನನ್ನ ತಮ್ಮನಾದ ಚಾಸಾ-7 ರವರು ನನಗೆ ಪೋನ ಮಾಡಿ ನನ್ನ ತಂದೆಯಾದ ಚಾಸಾ-6 ರವರಿಗೆ ಅಪಘಾತವಾಗಿದೆ ಎಂದು ಹೇಳಿದ್ದು, ನಾನು ಸ್ಥಳಕ್ಕೆ ಹೋಗಿ ಅವರನ್ನು ಆಸ್ಪತ್ರೆಗೆ ಸೇರಿಸಿರುತ್ತೇನೆ. ಅಪಘಾತ ಹೇಗೆ ಮತ್ತು ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಗೊತ್ತಿರುವದಿಲ್ಲ. ಸ್ಥಳದಲ್ಲಿ ಇದ್ದ ಜನರನ್ನು ವಿಚಾರಿಸಿದಾಗ ಬಸ್ಸ ನಂಬರ 1949 ಅಂತಾ ಹೇಳಿದ್ದು ಅದರ ಚಾಲಕನ ಹೆಸರು ಗೊತ್ತಿರುವದಿಲ್ಲ.ಈ ಕುರಿತು ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುವದಿಲ್ಲ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ವಿನಂತಿಸಿದ್ದರಿಂದ ಅನುಮತಿಸಲಾಯಿತು)

**ಪಾಟೀಸವಾಲು: ಸಹಾಯಕ ಸರಕಾರಿ ಅಭಿಯೋಜಕರವರಿಂದ**

ದಿನಾಂಕ 08-11-2018 ರಂದು ಚಾಸಾ-1 ರವರು ಚಲಾಯಿಸುತ್ತಿದ್ದ ಮೋಟಾರ ಸೈಕಲಿಗೆ ಆರೋಪಿ ಚಲಾಯಿಸುತ್ತಿದ್ದ ಕೆ ಎಸ್ ಆರ್ ಟಿ ಸಿ ಬಸ್ಸ ನಂಬರ ಕೆ ಎ-29- ಎಫ್ 1049 ಇದು ರಬಕವಿ ನಾಕಾ ಹತ್ತಿರ ಸಂಜೆ 05-40 ಗಂಟೆಗೆ ಅತೀ ಜೋರಾಗಿ ಅಲಕ್ಷತನದಿಂದ ಚಲಾಯಿಸುತ್ತಾ ಬಂದು ಎದುರುನಿಂದ ನನ್ನ ತಂದೆಯ ಮೋಟಾರ ಸೈಕಲಕ್ಕೆ ಹಾಯಿಸಿ ಅಪಘಾತ ಪಡಿಸಿದ್ದು ನನ್ನ ತಂದೆಗೆ ಸಾಮಾನ್ಯ ಸ್ವರೂಪದ ಗಾಯ ಪಡಿಸಿದ್ದು, ಚಾಸಾ-7 ರವರ ಹೇಳಿಕೆಯ ಮೇರೆಗೆ ನಾನು ಸ್ಥಳಕ್ಕೆ ಹೋಗಿ ಅವರನ್ನು ಆಸ್ಪತ್ರೆಗೆ ಸೇರಿಸಿದ್ದು, ಆರೋಪಿಯ ತಪ್ಪಿನಿಂದ ಆಪಘಾತವಾಗಿರುತ್ತದೆ ಎಂದು ನನ್ನ ತಂದೆ ಹೇಳಿರುತ್ತಾರೆಂದು ನಾನು ಪೋಲಿಸರ ಮುಂದೆ ಹೇಳಿಕೆ ಮತ್ತು ಮರು ಹೇಳಿಕೆ ಕೊಟ್ಟಿರುತ್ತೇನೆಂದು ಸೂಚಿಸುವದು ಸರಿಯಲ್ಲ.

ಸಾಕ್ಷಿಗೆ ಸದರಿ ಹೇಳಿಕೆಯ ಭಾಗವನ್ನು ಓದಿ ಹೇಳಲಾಗಿ ಸಾಕ್ಷಿ ಅದನ್ನು ನಿರಾಕರಿಸಿದ್ದು, ಸಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ-7 ಎಂದು ಗುರುತಿಸಲಾಯಿತು. ನನಗೆ ನಿಪಿ-7 ರಲ್ಲಿರುವ ಎಲ್ಲಾ ಸಂಗತಿಗಳು ತಿಳಿದಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀಸವಾಲು: ಆರೋಪಿಯ ಪರ ಶ್ರೀ ಎಸ್ ವಿ ಎಸ್ ವಕೀಲರಿಂದ:-**

ನನಗೆ ಅಪಘಾತದ ಬಗ್ಗೆ ಯಾವುದೇ ಮಾಹಿತಿ ಇಲ್ಲದ್ದಿದ್ದರೂ ಚಾಸಾ-6 ರವರಿಗೆ ಅನುಕೂಲ ಮಾಡಿಕೊಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ. ಕೇ. ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ., ಬನಹಟ್ಟಿ.

**ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ**

**ಸಿ.ಸಿ.ನಂ.523/2019**

ಅಸಾ:5 (ಚಾಸಾ-8)

| | |
|---|---|
| ಹೆಸರು | ರುಸ್ತುಮ ಮುಜಾವರ |
| ತಂದೆಯ /ಗಂಡನ ಹೆಸರು | ಹಸನಸಾಬ |
| ವಯಸ್ಸು | 48 ವರ್ಷ |
| ಉದ್ಯೋಗ | ಟೇಲರಿಂಗ ಕೆಲಸ |
| ವಾಸಸ್ಥಳ | ಜಮಖಂಡಿ |

ದಿನಾಂಕ 30-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ:-**

ಚಾಸಾ-6 ನನ್ನ ಸಹೋದರ. ಚಾಸಾ-1, 7 ಮತ್ತು 9 ರವರು ಚಾಸಾ-6 ರವರ ಮಕ್ಕಳು. ಆರೋಪಿಯ ಪರಿಚಯ ಇರುವದಿಲ್ಲ. ದಿನಾಂಕ 08-11-2018 ರಂದು ಸಂಜೆ 05-00 ಗಂಟೆಗೆ ಚಾಸಾ-6 ರವರಿಗೆ ಮಹಾಲಿಂಗಪೂರ ಸರ್ಕಲದಲ್ಲಿ ಅಪಘಾತವಾಗಿದ್ದು ಈ ಕುರಿತು ಚಾಸಾ-1 ಮತ್ತು 7 ರವರು ನನಗೆ ಪೋನ ಮಾಡಿ ಹೇಳಿರುತ್ತಾರೆ. ನಂತರ ನಾನು ಸ್ಥಳಕ್ಕೆ ಹೋಗಿ ಅವರನ್ನು ಆಸ್ಪತ್ರೆಗೆ ಸೇರಿಸಿರುತ್ತೇನೆ. ಅಪಘಾತ ಪಡಿಸಿದ ಬಸ್ಸ ನಂಬರ ನನಗೆ ಹೇಳಲು ಬರುವದಿಲ್ಲ. ಚಾಲಕನ ಹೆಸರು ರಾಮಚಂದ್ರ ಅಂತಾ ಇರುತ್ತದೆ. ಈ ಕುರಿತು ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಎಸ್ ವಿ ಎಸ್ ವಕೀಲರಿಂದ:-**

ಚಾಸಾ-6 ರವರ ನನ್ನ ಅಣ್ಣ ಇರುವ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಹೇಳಿಕೆ ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಅಪಘಾತದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ.ಕೇ.ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ. ದಂ., ಬನಹಟ್ಟಿ.

**<u>ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ</u>**

**<u>ಸಿ.ಸಿ.ನಂ.523/2019</u>**

ಅಸಾಃ 4 (ಚಾಸಾ-7)

| | |
|---|---|
| ಹೆಸರು | ಬುರಾನ ಮುಜಾವರ |
| ತಂದೆಯ /ಗಂಡನ ಹೆಸರು | ಬಾಶಾಸಾಬ |
| ವಯಸ್ಸು | 30 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸಸ್ಥಳ | ಹನಗಂಡಿ |

ದಿನಾಂಕ 30-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ:-</u>**

ಚಾಸಾ-6 ನನ್ನ ತಂದೆ, ಚಾಸಾ-1 ಮತ್ತು 9 ನನ್ನ ಸಹೋದರರು. ನನಗೆ ಆರೋಪಿಯ ಪರಿಚಯ ಇರುವದಿಲ್ಲ. ಸುಮಾರು 06 ವರ್ಷಗಳ ಹಿಂದೆ ನನ್ನ ತಂದೆಯಾದ ಚಾಸಾ-6 ರವರು ನನಗೆ ಫೋನ ಮಾಡಿ ರಬಕವಿ ನಾಕಾ ಹತ್ತಿರ ಅಪಘಾತವಾಗಿರುತ್ತದೆ ಎಂದು ಹೇಳಿರುತ್ತಾರೆ. ನಾನು ಸ್ಥಳಕ್ಕೆ ಹೋಗಿ ನನ್ನ ತಂದೆಯನ್ನು ಆಸ್ಪತ್ರೆಗೆ ಸೇರಿಸಿರುತ್ತೇನೆ. ನಾನು ಅಪಘಾತವನ್ನು ನೋಡಿರುವದಿಲ್ಲ. ಆರೋಪಿಯ ಮೇಲೆ ಏನು ಪ್ರಕರಣ ದಾಖಲಾಗಿದೆ ಎಂದು ಗೊತ್ತಿರುತ್ತದೆ. ಬಸ್ಸಿನ ನಂಬರಾಗಲೀ ಅಥವಾ ಅದರ ಚಾಲಕನ ಹೆಸರಾಗಲೀ ನನಗೆ ಗೊತ್ತಿರುವದಿಲ್ಲ. ಈ ಕುರಿತು ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿರುವದಿಲ್ಲ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ವಿನಂತಿಸಿದ್ದರಿಂದ ಅನುಮತಿಸಲಾಯಿತು)

**<u>ಪಾಟೀಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ದಿನಾಂಕ 08-11-2018 ರಂದು ಚಾಸಾ-1 ರವರು ಚಲಾಯಿಸುತ್ತಿದ್ದ ಮೋಟಾರ ಸೈಕಲಿಗೆ ಆರೋಪಿ ಚಲಾಯಿಸುತ್ತಿದ್ದ ಕೆ ಎಸ್ ಆರ್ ಟಿ ಸಿ ಬಸ್ಸ ನಂಬರ ಕೆ ಎ-29- ಎಫ್ 1049 ಇದು ರಬಕವಿ ನಾಕಾ ಹತ್ತಿರ ಸಂಜೆ 05-40 ಗಂಟೆಗೆ ಅತೀ ಜೋರಾಗಿ ಅಲಕ್ಷತನದಿಂದ ಚಲಾಯಿಸುತ್ತಾ ಬಂದು ಎದುರುನಿಂದ ನನ್ನ ತಂದೆಯ ಮೋಟಾರ ಸೈಕಲಕ್ಕೆ ಹಾಯಿಸಿ ಅಪಘಾತ ಪಡಿಸಿದ್ದು ನನ್ನ ತಂದೆಗೆ ಸಾಮಾನ್ಯ ಸ್ವರೂಪದ ಗಾಯ ಪಡಿಸಿದ್ದು, ನನ್ನ ತಂದೆಯ ಹೇಳಿಕೆಯ ಮೇರೆಗೆ ನಾನು ಸ್ಥಳಕ್ಕೆ ಹೋಗಿ ಅವರನ್ನು ಆಸ್ಪತ್ರೆಗೆ ಸೇರಿಸಿದ್ದು, ಆರೋಪಿಯ ತಪ್ಪಿನಿಂದ ಆಪಘಾತವಾಗಿರುತ್ತದೆ ಎಂದು ನನ್ನ ತಂದೆ ಹೇಳಿರುತ್ತಾರೆಂದು ನಾನು ಪೋಲಿಸರ ಮುಂದೆ ಹೇಳಿಕೆ ಮತ್ತು ಮರು ಹೇಳಿಕೆ ಕೊಟ್ಟಿರುತ್ತೇನೆಂದು ಸೂಚಿಸುವದು ಸರಿಯಲ್ಲ.

ಸಾಕ್ಷಿಗೆ ಸದರಿ ಹೇಳಿಕೆಯ ಭಾಗವನ್ನು ಓದಿ ಹೇಳಲಾಗಿ ಸಾಕ್ಷಿ ಅದನ್ನು ನಿರಾಕರಿಸಿದ್ದು, ಸಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ-6 ಎಂದು ಗುರುತಿಸಲಾಯಿತು. ನನಗೆ ನಿಪಿ-6 ರಲ್ಲಿರುವ ಎಲ್ಲಾ ಸಂಗತಿಗಳು ತಿಳಿದಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀಸವಾಲುಃ ಆರೋಪಿಯ ಪರ ಶ್ರೀ ಎಸ್ ವಿ ಎಸ್ ವಕೀಲರಿಂದ:-</u>**

ನನಗೆ ಅಪಘಾತದ ಬಗ್ಗೆ ಯಾವುದೇ ಮಾಹಿತಿ ಇಲ್ಲದ್ದಿದ್ದರೂ ಚಾಸಾ-6 ರವರಿಗೆ ಅನುಕೂಲ ಮಾಡಿಕೊಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ. ಕೇ. ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ., ಬನಹಟ್ಟಿ.

ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ

**ಸಿ.ಸಿ.ನಂ.523/2019**

ಅಸಾಃ 3 (ಚಾಸಾ-6)

| | |
|---|---|
| ಹೆಸರು | ಬಾಶಾಸಾಬ ಮುಜಾವರ |
| ತಂದೆಯ /ಗಂಡನ ಹೆಸರು | ಹಸನಸಾಬ |
| ವಯಸ್ಸು | 60 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸಸ್ಥಳ | ಹನಗಂಡಿ |

ದಿನಾಂಕ 30-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ:-**

ನನಗೆ ಚಾಸಾ-1, 7 ಮತ್ತು 9 ರವರು ನನ್ನ ಮಕ್ಕಳು. ಚಾಸಾ-8 ನನ್ನ ತಮ್ಮ. ಆರೋಪಿಯ ಪರಿಚಯ ಇರುವದಿಲ್ಲ. 2018 ರಲ್ಲಿ ಒಂದು ದಿನ ಸಂಜೆ 04-00 ಗಂಟೆಗೆ ನಾನು ಹನಗಂಡಿಯಲ್ಲಿರುವ ನನ್ನ ಮನೆಗೆ ಮೋಟಾರ ಸೈಕಲ ಮೇಲೆ ಹೋಗುತ್ತಿದ್ದಾಗ ಮಹಾಲಿಂಗಪೂರ ರಬಕವಿ ನಾಕಾ ಹತ್ತಿರ ಮಹಾಲಿಂಗಪೂರದಿಂದ ಬರುತ್ತಿದ್ದ ಒಂದು ಕೆ ಎಸ್ ಆರ್ ಟಿ ಸಿ ಬಸ್ಸ ಜೋರಾಗಿ ಬಂದು ನನ್ನ ಮೋಟಾರ ಸೈಕಲಕ್ಕೆ ಹಾಯಿಸಿ ಅಪಘಾತ ಪಡಿಸಿರುತ್ತದೆ. ನಾನು ನನ್ನ ಮಗನಾದ ಚಾಸಾ-7 ರವರಿಗೆ ಪೋನ ಮಾಡಿ ವಿಷಯ ಹೇಳಿರುತ್ತೇನೆ. ಆತನು ಸ್ಥಳಕ್ಕೆ ಬಂದು ನನ್ನನ್ನು ಜಮಖಂಡಿಯ ಕುಸುಬಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾನೆ. ಅಪಘಾತದಲ್ಲಿ ನನ್ನ ಬಲಕೆನ್ನೆಗೆ ಗಾಯವಾಗಿರುತ್ತದೆ. ಬಸ್ಸಿನ ನಂಬರಾಗಲೀ ಅಥವಾ ಅದರ ಚಾಲಕನ ಹೆಸರಾಗಲೀ ನನಗೆ ಹೇಳಲು ಬರುವದಿಲ್ಲ. ಈ ಕುರಿತು ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಎಸ್ ವಿ ಎಸ್ ವಕೀಲರಿಂದ:-**

ನಾನು ರಬಕವಿಯಿಂದ ಹನಗಂಡಿ ಕಡೆಗೆ ಹೋಗುತ್ತಿದ್ದೇನು. ನಾನು ಮೋಟಾರ ಸೈಕಲ ಮೇಲೆ ಸಾಮಾನುಗಳನ್ನು ತೆಗೆದುಕೊಂಡು ಹೋಗುತ್ತಿದ್ದ ಕಾರಣ ನಿಯಂತ್ರಣ ತಪ್ಪಿ ಮೋಟಾರ ಸೈಕಲ ಮೇಲಿಂದ ಸ್ವತಃ ಬಿದ್ದಿರುತ್ತೇನೆಂದರೆ ಸರಿಯಲ್ಲ. ಅಪಘಾತ ನನ್ನ ತಪ್ಪಿನಿಂದ ಆಗಿದ್ದರೂ ಆರೋಪಿತನ ತಪ್ಪಿನಿಂದ ಆಗಿರುತ್ತದೆ ಎಂದು ಪರಿಹಾರ ಹಣ ಪಡೆದುಕೊಳ್ಳಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ.ಕೇ.ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ. ದಂ., ಬನಹಟ್ಟಿ.